# ಕನ್ನಡ ಲಲಿತ ಪ್ರಬಂಧಗಳಲ್ಲಿ ಮಾನವೀಯ ಮೌಲ್ಯಗಳು

**ನಿಕಿತಾ ರಮೇಶ ಚನ್ನಾಳೆ[1] & ಮಹೇಶ ಚಿಂತಾಮಣಿ[2]**

[1]ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

[2] ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**Received: 31/05/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619654**

## ABSTRACT:

ಕನ್ನಡ ಸಾಹಿತ್ಯದ ಅನೇಕ ಬರಹಗಳು ಸಮಾನತೆ, ಸ್ತ್ರೀವಾದ, ವಾಸ್ತವತೆ, ಸಮಾಜಿಕ ದೃಷ್ಟಿಕೋನ, ಕಲ್ಪನೆ ಹೀಗೆ ಅನೇಕ ವಿಷಯಗಳ ಬಗೆಗೆ ಬೆಳಕು ಚಲ್ಲಿವೆ. ಅದೇ ರೀತಿಯಲ್ಲಿ ಲಲಿತ ಪ್ರಬಂಧಗಳು ಕೂಡ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿವೆ. ಲಲಿತ ಪ್ರಬಂಧಗಳು ಕೂಡ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿವೆ. ಮೌಲ್ಯಗಳಿಲ್ಲದೆ ಇದ್ದರೆ ಅದು ಸಾಹಿತ್ಯವಲ್ಲ. ಹಾಗಾಗಿ ಯಾವುದೇ ಸಾಹಿತ್ಯ ಮಾನವೀಯ ಮೌಲ್ಯಗಳು ಪ್ರಮುಖವಾಗಿ ಒಳಗೊಂಡಿರಲೇಬೇಕು. ಕನ್ನಡ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದ ಎ.ಎನ್. ಮೂರ್ತಿರಾವ್ ಅವರ ಪ್ರಬಂಧಗಳು ಮತ್ತು ಭುವನೇಶ್ವರಿ ಹೆಗಡೆಯವರ ಲಲಿತ ಪ್ರಬಂಧಗಳು ಮಾನವೀಯ ಮೌಲ್ಯಗಳನ್ನು ಬಿತ್ತರಿಸಿವೆ. ಧಾರ್ಮಿಕ, ಸಮಾಜಿಕ, ಮಾನವೀಯ ಮೌಲ್ಯಗಳು ಬದುಕಿನ ಮೆಟ್ಟಿಲೇರಲು ಮೌಲ್ಯಗಳು ಪ್ರಮುಖವಾಗಿವೆ. ಮೌಲ್ಯಗಳು ಉತ್ತಮ ಸಮಾಜವನ್ನು ನಿರ್ಮಾಣ ಮಾಡಲು ಅತ್ಯಗತ್ಯ.

## KEYWORDS:

ಎ.ಎನ್. ಮೂರ್ತಿರಾವ್, ಭುವನೇಶ್ವರಿ ಹೆಗಡೆ, ಲಲಿತ ಪ್ರಬಂಧ, ಮಾನವೀಯ ಮೌಲ್ಯಗಳು, ಜೀವನ, ಸಮಾಜ.

ಮಾನವೀಯ ಮೌಲ್ಯಗಳು ಮನುಷ್ಯನ ಬದುಕಿಗೆ ಅವಶ್ಯಕ. ಮನುಷ್ಯ ಉಸಿರಾಡಲು ಗಾಳಿ ಎಷ್ಟು ಮುಖ್ಯವೋ ಅಷ್ಟೇ ಮೌಲ್ಯಗಳು ಮುಖ್ಯವಾಗಿರುತ್ತವೆ. ಒಬ್ಬ ಮನುಷ್ಯನ ಜೀವನದಲ್ಲಿ ಹಣ, ಅಧಿಕಾರ, ಅಂತಸ್ತು ತಾತ್ಕಾಲಿಕವಾಗಿದ್ದು, ಇವು ವ್ಯಕ್ತಿಯ ಬಾಹ್ಯ ಜೀವನಕ್ಕೆ ಮಾತ್ರ ಸಂಬಂಧಪಟ್ಟಿರುತ್ತವೆ. ಮಾನವನ ಆಂತರಿಕ ಜೀವನ ಮೌಲ್ಯಗಳಾದ ಸದ್ಗುಣ, ಸಹಕಾರ, ಆದರ್ಶ ಇವು ಶಾಶ್ವತವಾದವುಗಳಾಗಿವೆ. ಮಾನವೀಯ ಮೌಲ್ಯಗಳನ್ನು ಹಲವು ರೀತಿಯಲ್ಲಿ ಕಾಣುತ್ತೇವೆ. ವೈಯಕ್ತಿಕ ಮೌಲ್ಯಗಳು, ನೈತಿಕ ಮೌಲ್ಯಗಳು, ಸಾಂಸ್ಕೃತಿಕ ಮೌಲ್ಯಗಳು, ಆಧ್ಯಾತ್ಮಿಕ ಮೌಲ್ಯಗಳು,

ಶೈಕ್ಷಣಿಕ ಮೌಲ್ಯಗಳು. ಹೀಗೆ ಹಲವಾರು ರೀತಿಯಲ್ಲಿ ಮೌಲ್ಯಗಳು ಕಾಣುತ್ತವೆ.

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ 'ಲಲಿತ ಪ್ರಬಂಧವು ನವೋದಯ ಸಾಹಿತ್ಯ ಸಂದರ್ಭದಲ್ಲಿ ರೂಪುಗೊಂಡಿರುವಂಥ ಸಾಹಿತ್ಯ ಪ್ರಕಾರವಾಗಿದೆ. ಇಂಗ್ಲೀಷಿನ 'Essay'ಗೆ ನೇರವಾಗಿ ಅನುವಾದ ಕನ್ನಡದ ಪ್ರಬಂಧ ಎನ್ನಲಾಗುತ್ತದೆ. ಕನ್ನಡ ಲಲಿತ ಪ್ರಬಂಧಗಳ ಚೌಕಟ್ಟು ಮತ್ತು ಆಕೃತಿ ಇಂಗ್ಲೀಷ ಮಾದರಿಯಾಗಿದ್ದರೂ, ಅದರಲ್ಲಿರುವ ಚಿತ್ರ ಕೃತಿಕಾರನ ಅನುಭವದಿಂದ ಕೂಡಿದೆ. ಪ್ರಬಂಧ ಸಾಹಿತ್ಯ ಪಾಶ್ಚಾತ್ಯರ ಕೊಡುಗೆಯಾದರೂ ಅದು ಕನ್ನಡದಲ್ಲಿ ತನ್ನದೇ ರೂಪ ಎನ್ನುವಂತೆ ಗುರುತಿಸಿಕೊಂಡಿದೆ. ಕನ್ನಡ ಲಲಿತ ಪ್ರಬಂಧಗಳು ಒಂದೇ ವಿಷಯಕ್ಕೆ ಸೀಮಿತವಾಗಿರದೆ ಹಲವು ವಸ್ತು ವಿಷಯಗಳನ್ನು ಒಳಗೊಂಡು ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. ಅದರಲ್ಲಿ ಮುಖ್ಯವಾಗಿ ಸಮಾಜಿಕ ಪ್ರಬಂಧಗಳು, ಕುಟುಂಬಗಳ ಸ್ವರೂಪ, ಪ್ರಕೃತಿ, ಹಾಸ್ಯದ ಸ್ವರೂಪ, ಮಾನವೀಯ ಮೌಲ್ಯಗಳು ಹೀಗೆ ಹಲವಾರು ವಿಷಯಗಳನ್ನು ಒಳಗೊಂಡ ಉತ್ತಮ ಗುಣಮಟ್ಟದ ಪ್ರಬಂಧಗಳನ್ನು ಹೊಸಗನ್ನಡ ಸಾಹಿತ್ಯದಲ್ಲಿ ಕಾಣಬಹುದು. ಕನ್ನಡ ಲಲಿತ ಪ್ರಬಂಧಕಾರರಲ್ಲಿ ಎ.ಎನ್. ಮೂರ್ತಿರಾವ್, ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ. ಅದೇ ರೀತಿ ಕನ್ನಡ ಪ್ರಬಂಧಕಾರ್ತಿಯರಲ್ಲಿ ಟಿ. ಸುನಂದಮ್ಮ, ಸುನಂದಾ ಬೆಳಗಾಂವಕರ್, ಭುವನೇಶ್ವರಿ ಹೆಗಡೆ ಹೀಗೆ ಹಲವಾರು ಪ್ರಬಂಧಕಾರ್ತಿಯರನ್ನು ಗಮನಿಸಬಹುದು.

"ಕನ್ನಡ ಲಲಿತ ಪ್ರಬಂಧಗಳಲ್ಲಿ ಮಾನವೀಯ ಮೌಲ್ಯಗಳು" ಎನ್ನುವುದು ಈ ಲೇಖನದ ಶೀರ್ಷಿಕೆಯಾಗಿದೆ. ಮಾನವನ ಜೀವನದಲ್ಲಿ ಮೌಲ್ಯಗಳಿದ್ದಾಗಲೇ ಆ ಜೀವನಕ್ಕೊಂದು ಬೆಲೆ ಬರುತ್ತದೆ. ಇಡೀ ಪ್ರಪಂಚದ ಜೀವರಾಶಿಗಳಲ್ಲಿ ಕೇವಲ ಮನುಷ್ಯನು ಮಾತ್ರ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯ. ಇಡೀ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಮೌಲ್ಯಗಳು ಇಲ್ಲದೆ ಇರುವ ಸಾಹಿತ್ಯ ಕಂಡುಬರುವುದಿಲ್ಲ. ಹಾಗೆಯೇ ಈ ಲಲಿತ ಪ್ರಬಂಧಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳ ಬಗ್ಗೆ ಸಮಾಲೋಚನೆ ಮಾಡುವುದು ಈ ಲೇಖನದ ಉದ್ದೇಶವಾಗಿದೆ. ಪ್ರಸ್ತುತ ಲೇಖನದಲ್ಲಿ ಎ.ಎನ್. ಮೂರ್ತಿರಾವ್ ಮತ್ತು ಭುವನೇಶ್ವರಿ ಹೆಗಡೆಯವರ ಲಲಿತ ಪ್ರಬಂಧಗಳನ್ನು ಪ್ರಧಾನವಾಗಿ ಗಮನಿಸಿ ವಿಷಯ ಮಂಡನೆ ಮಾಡಲಾಗಿದೆ.

ಈ ಪ್ರಬಂಧಗಳಲ್ಲಿ ಮೂರು ರೀತಿಯ ಮಾನವೀಯ ಮೌಲ್ಯಗಳನ್ನು ಒಳಗೊಂಡ ಉತ್ತಮ ಗುಣಮಟ್ಟದ ಪ್ರಬಂಧಗಳನ್ನು ವಿಂಗಡಿಸಲಾಗಿದೆ. ಮುಖ್ಯವಾಗಿ ಎ.ಎನ್. ಮೂರ್ತಿರಾವ್ ಹಾಗೂ ಭುವನೇಶ್ವರಿ ಹೆಗಡೆಯವರ ಲಲಿತ ಪ್ರಬಂಧಗಳನ್ನು ಆಯ್ದುಕೊಂಡು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಭುವನೇಶ್ವರಿಯವರು ತಮ್ಮ ಒಂದು ಪ್ರಬಂಧದಲ್ಲಿ ಏಕಾಂತ ಸುಖದ ಕುರಿತು ವಿವರಿಸಿದ್ದನ್ನು ಗಮನಿಸಬಹುದು. ಈ ಪ್ರಬಂಧದಲ್ಲಿ ಮಾನವನ ಜೀವನದಲ್ಲಿ ಏಕಾಂತತೆಯು ಮುಖ್ಯವಾಗಿರುತ್ತದೆ. ಮನುಷ್ಯನು ಸಮಾಜ ಜೀವಿ ನಿಜ. ಆದರೆ ಆತನಿಗೆ ತನ್ನೊಂದಿಗೆ ತನ್ನತನದ ಅರಿವಿನೊಂದಿಗೆ ಜೀವಿಸುವುದು ಮುಖ್ಯವಾಗಿರುತ್ತದೆ. ಕೆಲವು ಸಲ ಇತರರೊಂದಿಗೆ ಸಮಸ್ಯೆಗಳನ್ನು ಹಂಚಿಕೊಳ್ಳುವ ಬದಲು ತಮ್ಮೊಂದಿಗೆ ತಾವೇ ಆತ್ಮವಿಮರ್ಶೆ ಮಾಡಿಕೊಂಡರೆ ಅದೆಷ್ಟು ಸಮಸ್ಯೆಗಳನ್ನು ಸಲೀಸಾಗಿ ನಿವಾರಿಸಿಕೊಳ್ಳಬಹುದಾಗಿದೆ ಎಂಬ ಒಳಾರ್ಥದಲ್ಲಿ ಅಡಗಿರುವ 'ಏಕಾಂತ ಸುಖ' ಎಂಬ ಪ್ರಬಂಧದಲ್ಲಿ ಕಾಣಬಹುದಾಗಿದೆ. ಭುವನೇಶ್ವರಿ ಹೆಗಡೆಯವರ "ಅಲಸ್ಯ ವೃತ್ತಾಂತ" ಎಂಬ ಪ್ರಬಂಧದಲ್ಲಿ ಮಾನವನ ಆಲಸ್ಯತನವನ್ನು ಕುರಿತು ವಿವರಿಸುತ್ತಾರೆ. ಪ್ರತಿಯೊಬ್ಬ ಮನುಷ್ಯನಲ್ಲಿ ಉತ್ಸಾಹ ಮತ್ತು ಆಲಸ್ಯ ಇರುತ್ತದೆ. ಮನುಷ್ಯನನ್ನು ಉತ್ತಮನನ್ನಾಗಿ ಮಾಡಿದರೆ ಆಲಸ್ಯವು ಆತನನ್ನು ಅಧಮನನ್ನಾಗಿಸುತ್ತದೆ. "ಉತ್ಸಾಹ ಹಾಗೂ ಆಲಸ್ಯ" ಇವೆರಡೂ ಶಬ್ದಗಳಲ್ಲಿ ಸವತಿ ಸಂಬಂಧ. ನೀವು ಆಲಸ್ಯಗಳಾಗಬಯಸುತ್ತೀರೋ ಉತ್ಸಾಹವನ್ನು ಬಲಿ ಕೊಡಬೇಡಿ. ಉತ್ಸಾಹಿಗಳಾಗಬಯಸುತ್ತೀರೋ ಆಲಸ್ಯವನ್ನು ಹೊರದಬ್ಬಿ "ಹೀಗೆ ಉತ್ಸಾಹ ಮತ್ತು ಆಲಸ್ಯಗಳ" ಸಮಸ್ಯೆಗಳ ಕುರಿತು ತಮ್ಮ ಪ್ರಬಂಧದ ಮೂಲಕ ಜೀವನ ಮೌಲ್ಯಗಳು ಇವರ ಪ್ರಬಂಧಗಳಲ್ಲಿ ಕಾಣಬಹುದಾಗಿದೆ. "ಉತ್ಸಾಹ ಏರಿದರೆ ಚಂದ ಅಲಸ್ಯ ಇಳಿದರೆ ಚಂದ" ಈ ವಾಕ್ಯವೊಂದನ್ನು ಮಾನವ ಜೀವನದಲ್ಲಿ ಬಳಸಿಕೊಂಡರೆ ಪ್ರತಿದಿನವೂ ಚೈತನ್ಯಮಯವಾಗಿರುತ್ತದೆ ಎಂದು ಹೇಳಬಹುದು. ಇನ್ನೊಂದು ಪ್ರಬಂಧವಾದ 'ಮೂಢನಂಬಿಕೆಗಳ ಬೀಡಿನಲ್ಲಿ' ಇದರಲ್ಲಿ ಹಿರಿಯ ಆಚರಣೆಗಳ ವಿಚಾರಗಳು ಇಂದಿನ ದಿನಮಾನಗಳಲ್ಲಿ ಹೇಗೆ ಉಪಯುಕ್ತವಾಗಿವೆ ಎಂಬುದನ್ನು ಸಾಂಸ್ಕೃತಿಕ ಮೌಲ್ಯಗಳಲ್ಲಿ ಕಂಡುಬರುತ್ತವೆ. ಹಿರಿಯರು ತಮ್ಮ ದಿನನಿತ್ಯದ ಜೀವನದಲ್ಲಿ ಕೆಲವು ನಂಬಿಕೆಗಳು ಆಚರಣೆಗಳನ್ನು ರೂಢಿಸಿಕೊಂಡಿದ್ದರೂ ಅವು ಹೇಗೆ ಎಂಬುದನ್ನು ತಮ್ಮ ಪ್ರಬಂಧಗಳಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಮೂರು ಸಂಜೆಯ ಹೊತ್ತಿನಲ್ಲಿ ಮಲಗಬಾರದು, ಹೆಣ್ಣುಮಕ್ಕಳು ಅಕ್ಕಿ ಆರಿಸುವಾಗ ಅವರ ಮದುವೆಯಲ್ಲಿ ಮಳೆ ಬರುತ್ತದೆ ಎಂಬ ಪ್ರತೀತಿ. ಎಲ್ಲಿಗಾದರೂ ಹೊರಟಕೂಡಲೇ ಎಲ್ಲಿಗೆ ಸ್ವಾಮಿ ಎಂಬ ಸ್ವರ ಎದುರಾದರೆ ಅದು ಅಪಶಕುನವೆಂದು ಮನೆಯ ಗೋಡೆಯ ಮೇಲೆ ಇಂದಲ್ಲ ನಾಳೆ ಬಾ, ಇಂತಹ ಅನೇಕ ನಂಬಿಕೆಗಳು ನಮ್ಮ ಜೀವನದೊಂದಿಗೆ ಗೊತ್ತಿದ್ದೋ ಗೊತ್ತಿರಲಾರದೆಯೋ ಬಂದುಬಿಡುತ್ತವೆ. ಆದರೆ ಪ್ರತಿಯೊಂದಕ್ಕೂ ವೈಜ್ಞಾನಿಕವಾಗಿ ಚಿಂತಿಸುವವರ ಗುಂಪೇ ಬೇರೆಯಾಗಿರುತ್ತದೆ. ಈಗಾಗಲೇ ಇವರು ನಂಬಿಕೆಗಳನ್ನು ಹಾಗೆ ಪಾಲಿಸುತ್ತಾ ಹೋಗುವ ಗುಂಪೊಂದು ಇರುತ್ತದೆ. ಆದರೆ ಲೇಖಕಿಯರ ಪ್ರಕಾರ ಜೀವನ ನೀರಸವಾಗಿ ನಡೆಯಬಾರದೆಂದರೆ ದಿನನಿತ್ಯದ ಬದುಕಿನಲ್ಲಿ ಹಿರಿಯರ ನಂಬಿಕೆಗಳು ನಮ್ಮೊಂದಿಗೆ ಇದ್ದರೆ ಚಂದ ಎಂದು

ವಾದಿಸಿರುವುದನ್ನು ಕಾಣಬಹುದಾಗಿದೆ. ಕೆಲವು ಮೂಢನಂಬಿಕೆಗಳನ್ನು ಅಪಹಾಸ್ಯ ಮಾಡುವುದು ಲೇಖಕಿ ವಿರೋಧಿಸಿರುವುದನ್ನು ತಾವು ಸ್ವತಃ ಹೇಳಿಕೊಂಡಿರುವುದು ಕಂಡುಬರುತ್ತದೆ.

ಕನ್ನಡ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳ ಬಗ್ಗೆ ಅನೇಕ ಲೇಖಕರು ತಮ್ಮ ಕೃತಿಗಳಲ್ಲಿ ವೈಶಿಷ್ಟ್ಯಪೂರ್ಣವಾಗಿ ಚಿತ್ರಿಸಿದ್ದಾರೆ. ಅದರಲ್ಲೂ ನವೋದಯ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳನ್ನು ಗಮನಿಸಿದಾಗ ವಿಶೇಷ ಸ್ಥಾನಮಾನವನ್ನು ಹೊಂದಿವೆ. ಎ.ಎನ್. ಮೂರ್ತಿರಾವ್ ಅವರ ಪ್ರಬಂಧಗಳಾದ ಅವರ ಹಗಲುಗನಸು, 'ಅಲೆಯುವ ಮನ' ಮತ್ತು 'ಮಿನುಗು ಮಿಂಚು' ಸಂಕಲನಗಳು ಕನ್ನಡ ಸಾಹಿತ್ಯದಲ್ಲಿ ಬಹು ದೊಡ್ಡ ಖ್ಯಾತಿಯನ್ನು ಪಡೆದಿವೆ.

ಎ.ಎನ್. ಮೂರ್ತಿರಾವ್ ಅವರ ಪ್ರಬಂಧಗಳಲ್ಲಿ ಮಾನವೀಯ ಮೌಲ್ಯಗಳು ಬದುಕಿನ ವೈವಿಧ್ಯಮಯವಾದ ಕಲಾತ್ಮಕತೆ ಮತ್ತು ವೈವಿಧ್ಯಮಯವಾದ ಸಂಭಾಷಣೆಗಳು ಕಂಡುಬರುತ್ತವೆ. ಇವರ ಪ್ರಬಂಧಗಳಲ್ಲಿ ಪತಿ-ಪತ್ನಿ, ಮನೆ, ಕುಟುಂಬ, ದಾಂಪತ್ಯಗಳು ಮುಖ್ಯ ಸ್ಥಾನ ಪಡೆದುಕೊಂಡಿವೆ. 'ಗೌರಜ್ಜಿ' ಪ್ರಬಂಧವು ಕೌಟುಂಬಿಕ ಸಂಬಂಧಗಳ ಮಹತ್ವ ಮತ್ತು ಗೌರವಜ್ಜಿಯ ಸಾತ್ವಿಕ ಮೌಲ್ಯಗಳ ಕುರಿತು ವಿವರಿಸುತ್ತದೆ. ಮದುವೆಯಾಗಿ ಮೂರೇ ವರ್ಷಕ್ಕೆ ಗಂಡನನ್ನು ಅತ್ತೆ ಕೊಟ್ಟ ಕಿರುಕುಳಗಳನ್ನು ಸಹಿಸಿಕೊಂಡು ತಾಳ್ಮೆ ಸಹನೆಯಿಂದ ಬಾಳನ್ನು ಜೀವಿಸಿದವರು. ಗೌರಜ್ಜಿಯ ಮೌಲ್ಯಗಳು ಪ್ರಮುಖವಾಗಿವೆ. ಗೌರವಜ್ಜಿಯ ಅತ್ತೆ ರಾತ್ರಿ ಉಳಿದ ಅನ್ನವನ್ನು ಮನೆಯಲ್ಲಿರುವ ಎಲ್ಲರಿಗೂ ಕೈತುತ್ತು ನೀಡುತ್ತಿದ್ದ ಪ್ರೀತಿ ಬಾಂಧವ್ಯ ಅಂದಿನ ಜನರ ಮೌಲ್ಯಗಳೆಂದು ಹೇಳಬಹುದು. ಹಿಂದಿನ ಕಾಲದ ಸಂಸಾರವೆಂದರೆ ತುಂಬಾ ಕಟ್ಟುನಿಟ್ಟಿನ ಜೀವನವಾಗಿತ್ತು. ಮದುವೆಯಾದ ಹೆಣ್ಣು ಅತ್ತೆಯ ಮನೆಯಲ್ಲಿ ಮಗಳಿದ್ದಂತೆ ಎನ್ನುತ್ತಾರೆ. ಆದರೆ ಗೌರಜ್ಜಿಯ ವಿಷಯದಲ್ಲಿ ಹಾಗಿರಲಿಲ್ಲ. ಆಕೆ ಮನೆಯ ಕೆಲಸದವಳಂತೆ ಆಳಾಗಿ ದುಡಿಯುತ್ತಿದ್ದಳು. ಗೌರಜ್ಜಿಯ ತವರೂರಿನಲ್ಲಿರುವ ಅಣ್ಣನ ಮಕ್ಕಳು ಹಳ್ಳಿಯಲ್ಲಿದ್ದ ತೋಟವನ್ನು ಉಳಿಸಿಕೊಳ್ಳದೆ ಹಾಳು ಮಾಡಿದ್ದನ್ನು ನೆನೆಸಿಕೊಂಡು ನೋವಿನಿಂದ ಬಯ್ಯುತ್ತಿರುತ್ತಾಳೆ. ಹೆಣ್ಣಮಕ್ಕಳಿಗೆ ತವರೂರಿನ ಮೇಲೆ ಪ್ರೀತಿ ಸಾಯುವವರೆಗೂ ಇರುತ್ತದೆ ಎಂಬುದಕ್ಕೆ ಗೌರಜ್ಜಿ ಉದಾಹರಣೆಯಾಗಿದ್ದಾಳೆ. ಮನೆಯ ಹಿರಿಯ ಜೀವಿಯಾದ ಗೌರವಜ್ಜಿಗೆ ಮಕ್ಕಳೆಂದರೆ ಪ್ರಾಣ. ರಾತ್ರಿ ಹೊತ್ತಾದರೆ ಮಕ್ಕಳಿಗೆ ಕತೆಯನ್ನು ಹೇಳುತ್ತಿದ್ದಳು. ಯಾರು ಇಲ್ಲದಿದ್ದರೂ ತಮ್ಮ ಕುಟುಂಬದವರಿಗೆ ಜೀವ ಎಂದುಕೊಂಡಿದ್ದರು. ನಿಸ್ವಾರ್ಥ ಸೇವೆಯಿಂದ ಇಡೀ ಕುಟುಂಬವನ್ನು ನೋಡಿಕೊಂಡ ಅಜ್ಜಿ ತಾನು ವಿಧವೆಯಾದ ಕಹಿ ನೆನಪುಗಳನ್ನು ಮರೆತವಳಾಗಿದ್ದಳು. "ಯಾರಿದ್ದರೇನು ಎಷ್ಟು ಹತ್ತಿರ ಸಂಬಂಧವಾದರೇನು ಎಷ್ಟು ಅದರಿಂದ ಕಂಡರೇನು ಹುಟ್ಟಿದ ಮಕ್ಕಳಿದ್ದ ಹಾಗಾಯಿತೆ" ಎಂದು ಕೆಲವೊಂದು ಸಲ ತಾನು ಪಟ್ಟ ಕಷ್ಟಗಳನ್ನೆಲ್ಲ

ನೆನಪಿಸಿಕೊಂಡು ಕೊರಗುತ್ತಾಳೆ. ದುಃಖವನ್ನು ನುಂಗಿ ಸಂತೋಷವನ್ನು ಹಂಚಿದ ಜೀವಿಯಾಗಿ ಅವಳಲ್ಲಿರುವ ಮಾನವೀಯ ಮೌಲ್ಯಗಳು ಪ್ರಮುಖವಾಗಿ ನಮಗೆ ಕಂಡುಬರುತ್ತವೆ. ಸಾಂಸಾರಿಕ ಜೀವನದಲ್ಲಿ ಹೊಂದಾಣಿಕೆ ಮತ್ತು ಸಾಮರಸ್ಯ ಅಮೂಲ್ಯವಾದದ್ದು. ಸಣ್ಣಪುಟ್ಟ ಕಲಹಗಳಿಗೆ ಮೌಲ್ಯಗಳನ್ನು ಬಲಿ ಮಾಡಬೇಡಿ ಎಂಬುವುದು ಪಾತ್ರದಿಂದ ತಿಳಿದುಬರುತ್ತದೆ.

'ತೆರೆದ ಮನ' ಲಲಿತ ಪ್ರಬಂಧವನ್ನು ಗಮನಿಸುವುದಾದರೆ ಇದರ ಹೆಸರೇ ಸೂಚಿಸುವಂತೆ ಮಾನವನ ಮನಸ್ಸು ಮಾನವೀಯತೆಯಿಂದ ಕೂಡಿರಬೇಕು, ತೆರೆದ ಪುಸ್ತಕದಂತೆ ಇರಬೇಕು ಎಂಬುವುದಾಗಿದೆ. ಒಬ್ಬ ಮನುಷ್ಯನು ಒಂದು ವಿಷಯದಲ್ಲಿ ಒಳ್ಳೆಯವನಾಗೆನಿಸಿದರೆ ಇನ್ನೊಂದು ವಿಷಯದಲ್ಲಿ ಕೆಟ್ಟವನಾಗಿ ಕಾಣಿಸಬಹುದು. ಹಾಗಾಗಿ ಮನುಷ್ಯರನ್ನು ಸಮಾನ ದೃಷ್ಟಿಯಿಂದ ನ್ಯಾಯಯುತವಾಗಿ ಕಾಣಬೇಕೆಂಬುದು ತೋರುತ್ತದೆ. ಒಬ್ಬರನ್ನು ಕಂಡಾಗ ತಟ್ಟನೆ ನಿರ್ಣಯಕ್ಕೆ ಬರಕೂಡದು. ಏಕೆಂದರೆ ಸಮಯ ಸಂದರ್ಭಗಳು ಅವನನ್ನು ಒಳ್ಳೆಯವನೆಂದು ಅಥವಾ ಕೆಟ್ಟವನಾಗಿ ಬಣ್ಣಿಸುತ್ತವೆ. ಈ ಪ್ರಬಂಧವು ಮಾನವನ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದೆ. ಭಾರತವು ಭಾಷಾ ವೈವಿಧ್ಯತೆಯನ್ನು ಹೊಂದಿದ್ದು, ಅನೇಕ ಭಾಷೆಗಳಿಂದ ಅನೇಕ ಸಂಸ್ಕೃತಿಯಿಂದ ಕೂಡಿರುವ ದೇಶವಾಗಿದೆ. ಭಾರತದಲ್ಲಿರುವ ಪ್ರತಿಯೊಬ್ಬರು ವಿಭಿನ್ನ ಭಾಷೆ, ವಿಭಿನ್ನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುತ್ತಾರೆ. ಆದರೆ ಕೆಲವರಿಗೆ ಬ್ರಿಟಿಷರ ಭಾಷೆ (ಇಂಗ್ಲಿಷ್) ಭಾಷೆಯ ಹೆಸರು ಹೆಸರೆತ್ತಿದರೆ ಆಗದು. ಈ ಭಾಷೆಯನ್ನು ಒಳಗೊಳ್ಳುವಂತಹ ಮನಸ್ಥಿತಿ ಬೆಳೆಸಿಕೊಳ್ಳುವುದು ಅತ್ಯವಶ್ಯಕವಾಗಿದೆ. ಹಿರಿಯರಿಗೆ ಈ ಭಾಷೆ ಬೇಡವೆನಿಸಿದರೆ, ಕಿರಿಯ ಆಧುನಿಕ ಯುವಕರಿಗೆ ಇದೇ ಸುಂದರವಾದ ಭಾಷೆಯಾಗಿ ಕಾಣುತ್ತದೆ. ಹಾಗಾಗಿ ಮಾನವನಿಗೆ ಪ್ರತಿಯೊಂದನ್ನೂ ಸ್ವೀಕರಿಸುವಂತಹ 'ತೆರೆದ ಮನಸು' ಇರಬೇಕೆಂಬುದು ಈ ಪ್ರಬಂಧದ ಉದ್ದೇಶವಾಗಿರಬೇಕೆಂದೆನಿಸುತ್ತದೆ. 'ನಿನ್ನ ಮನಸ್ಸು ತೆರೆದಿರಲಿ' ಕೀಪ್ ಆನ್ ಓಪನ್ ಮೈಂಡ್ ಅಂದರೆ ಕೆಲ ಸಂದರ್ಭದಲ್ಲಿ ಸರಿಯಾದ ನಿರ್ಣಯಕ್ಕೆ ಬರಬೇಕಾದರೆ ಈ ಮೇಲಿನ ಸೂತ್ರ ಸಹಾಯಕಾರಿಯಾಗುತ್ತದೆ ಎಂದು ಲೇಖಕರು ತಿಳಿಸಿರುತ್ತಾರೆ.

ಮಾನವ ಸ್ವಭಾವವು ಆತನ ಪರಿಸರಕ್ಕೆ ತಕ್ಕಂತೆ ಬದಲಾಗುತ್ತದೆ. ಅದು ಸ್ವಾಭಾವಿಕವಾದರೂ ಸಹ ವಿಭಿನ್ನ ಪರಿಸರದೊಂದಿಗೆ ವಿಭಿನ್ನ ರೀತಿಯ ಮಾನವ ಸ್ವಭಾವವು ಕಂಡುಬರುತ್ತದೆ. ಯಾವುದೇ ಸನ್ನಿವೇಶ ಅಥವಾ ಸಮಸ್ಯೆಗಳು ಕಂಡು ಬಂದಾಗ ಅದಕ್ಕೆ ಹತ್ತು ಮುಖಗಳಿರುತ್ತವೆ. ಅದನ್ನು ಕೇವಲ ನಮ್ಮ ಮನಸ್ಸಿನಲ್ಲಿರುವ ಅಂಶಗಳನ್ನು ಮಾತ್ರ ಪರಿಗಣಿಸಿದೆ. ಅವೆಲ್ಲವನ್ನು ಹತ್ತೂ ಮುಖಗಳಿಂದ ನೋಡುವುದು ತೆರೆದ ಮನದ ಪರಿಧಿಯೊಳಗೆ ಬರುತ್ತದೆ. ಒಂದು ಸಮಸ್ಯೆಯನ್ನು ಪರಿಹರಿಸಬೇಕಾದರೆ

ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ನಿರ್ಣಯಕ್ಕೆ ಬರಬೇಕಾದರೆ ಅನುಭವವನ್ನು ಸಾಕ್ಷವನ್ನು ಶೇಖರಿಸಿದಂತಹ ಕೆಲಸ ನಡೆಯಬೇಕಾಗುತ್ತದೆ. ಮೇಲ್ನೋಟಕ್ಕೆ ಪ್ರಶ್ನೆಗೆ ಉತ್ತರ ಕೊಡುವುದು ಸುಲಭವೆನಿಸಿದರೂ ಆಳವಾಗಿ ಅಧ್ಯಯನ ನಡೆಸಿದಾಗ ಮಾತ್ರ ಅದಕ್ಕೆ ನ್ಯಾಯವನ್ನು ಒದಗಿಸಿಕೊಡಬಹುದಾಗಿದೆ. ಕೇವಲ ಹೇಳಿರುವ ಮಾತನ್ನು, ಕೆಲವು ಬೇರೆಯವರಿಂದ ಕೇಳಿ ಬಂದ ವಿಷಯ ಮಾತ್ರ ಸತ್ಯವೆಂದು ಪರಿಗಣಿಸುತ್ತಾರೆ. ಹಾಗಾಗಿ ಕೆಲವರು ತಮ್ಮ ಒಳ ಅನುಭವದಿಂದ ಅರಿವಿಗೆ ಬಂದಿರುವುದನ್ನು ಸತ್ಯವಿದೆ ಎಂದು ನಿರ್ಣಯಕ್ಕೆ ಬರುತ್ತಾರೆ. ಆದರೆ ಇದು ಅಷ್ಟೊಂದು ನಿಖರವಾಗಿ ಹೇಳಲು ಬರುವುದಿಲ್ಲ. ಇದೆಲ್ಲವನ್ನು ಒಂದು ಕೊಲೆಯ ಉದಾಹರಣೆ ನೀಡುವ ಮೂಲಕ ಸತ್ಯದ ಕುರಿತು ಲೇಖಕರು ತಿಳಿಸುತ್ತಾರೆ. ಮಾನವ ಸಮಾಜವನ್ನು ಕುರಿತು ಹೇಳುವಾಗ "ಮಾನವನು ಅಜ್ಞಾನ, ಸ್ವಾರ್ಥ, ಸುಳ್ಳು, ಕ್ರೌರ್ಯ ಇತ್ಯಾದಿಗಳ ತಾಂಡವ ನೃತ್ಯದಂತೆ ಕಾಣುತ್ತದೆ. ನಾವು ಬದುಕಬೇಕಾದರೆ ಸಾಧ್ಯವಾದ ಮಟ್ಟಿಗಾದರೂ ಈ ನೃತ್ಯಕ್ಕೆ ಅವಕಾಶವನ್ನು ಕಡಿಮೆ ಮಾಡುವ ಏರ್ಪಾಡು ಮಾಡಿಕೊಳ್ಳಲೇಬೇಕು" ಎಂದು ಮಾನವ ಜೀವಿಗಳ ಕುರಿತು ಇರುವಂತಹ ಕಾಳಜಿ ತೆರೆದ ಮನಸ್ಸುಗಳಿಗೆ ಮಾತ್ರ ಇರಲು ಸಾಧ್ಯವೆಂದು ತಿಳಿಯಬಹುದಾಗಿದೆ. ಎ.ಎನ್. ಮೂರ್ತಿರಾಯರ ಈ ಪ್ರಬಂಧದಲ್ಲಿ ಮಾನವೀಯ ಮೌಲ್ಯಗಳಲ್ಲಿ ಒಂದಾದ ಪ್ರೀತಿ ಎಂಬ ವಿಷಯದ ಕುರಿತು ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಸುಗುಣ, ದುರ್ಗುಣ, ಪ್ರೀತಿ, ದ್ವೇಷ, ನ್ಯಾಯ, ಅನ್ಯಾಯ ಇವುಗಳ ಬಗ್ಗೆ ಸಮಗ್ರವಾಗಿ ಚಿತ್ರಣಗೊಂಡಿರುವುದು ಕಂಡು ಬರುತ್ತದೆ. ಮಾನವೀಯ ಮೌಲ್ಯಗಳಲ್ಲಿ ಒಂದಾದ ಪ್ರೀತಿ ಕುರಿತು ವಿವರಿಸಲಾಗಿದ್ದು, ನಕರಾತ್ಮಕ ನಿರಾಸಕ್ತಿಯನ್ನು ಬಿಟ್ಟು ಪ್ರೇಮವನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸುತ್ತಾರೆ. ದ್ವೇಷವನ್ನು ಮಾಡಲು ಕಾರಣವೇನೆಂದರೆ, ದ್ವೇಷಕ್ಕೆ ವಿರುದ್ಧವಾಗಿರುವ ಪ್ರೀತಿ ಎಂದು ತಿಳಿಯಬಹುದು. ಕೇಡು ಮಾಡಿದ ವ್ಯಕ್ತಿಯ ಮೇಲೆ ದ್ವೇಷವಾಗದೆ ಕೇಡಿಗತನವನ್ನು ಮಾತ್ರ ಕುರಿತು ದ್ವೇಷವಾಗಬೇಕು. ಕೇಡನ್ನು ನಾವು ನೋಡುವುದಿಲ್ಲವೆಂದರೆ ಸರಿಯಲ್ಲ. ಬದಲಾಗಿ ಕೇಡನ್ನು ಬಯಸಿದವರಿಗೂ ಒಳ್ಳೆಯದಾಗಲಿ ಎಂದು ಜೀವನದಲ್ಲಿ ಮುಂದುವರಿಯಬೇಕಾಗುತ್ತದೆ. "ಕೇಡನ್ನು ಗಮನಿಸಿದ ಮೇಲೂ ಕೇಡಿಗನನ್ನು ದ್ವೇಷಿಸದಿರಬೇಕು. ಈ ಕುರಿತು ತೆರೆದ ಮನ ಪ್ರಬಂಧವು ಮಾನವೀಯ ಮೌಲ್ಯಗಳನ್ನು ಒಳಗೊಂಡ ಓದುಗರಿಗೆ ಅನುಕೂಲವಾಗುವಂತಹ ಒಂದು ಮಹತ್ವದ ಪ್ರಬಂಧವಾಗಿದೆ.

ಮೂರ್ತಿರಾಯರ ಇನ್ನೊಂದು 'ಪ್ರಣಯ ಯಾತ್ರೆ' ಗಂಡ ಹೆಂಡತಿಯ ಸಂಬಂಧವನ್ನು ತಿಳಿಸುತ್ತದೆ. ಈ ಪ್ರಬಂಧದಲ್ಲಿ ಬರುವ ಲಲಿತೆ ತನ್ನ ಗಂಡನ ಜೊತೆ ಸದಾ ನಗುತ್ತಾ ಹಸನ್ಮುಖಿಯಾಗಿರುತ್ತಾಳೆ. ತನ್ನ ಮಗನ ಮೇಲೆ ಎಲ್ಲಿಲ್ಲದ ವಿಶ್ವಾಸವಿದ್ದು, ನಂಬಿಕೆಯ ದೋಣಿಯಲ್ಲಿ ಜೀವನವನ್ನು ಸರಳವಾಗಿ ಸಾಗಿಸಿರುತ್ತಾಳೆ. ಗಂಡನ ಜೊತೆ ವಾಕಿಂಗ್ ಟೆನ್ನಿಸ್ ಆಡಲು ಹೊರಗೆ ಹೋಗೋಣ ಎಂದರೆ ಕಾರಣ

ಆಗುತ್ತಿರಲಿಲ್ಲ. ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಮಹಿಳೆಯರಿಗೆ ಬೇಕಾಗಿದ್ದು ಅದರಿಂದ ಅವರು ಅದನ್ನು ಪಾಲಿಸಲೇ ಬೇಕಾಗಿತ್ತು. ಸಮಾಜದ ಜೊತೆ ಜೊತೆಗೆ ನಡೆದಾಡಿದಾಗ ಮಾತ್ರ ಸಮಾಜಜೀವಿಯಾಗಲು ಸಾಧ್ಯವಾಗುತ್ತದೆ. ಸಂಸ್ಕೃತಿ ಮತ್ತು ಸಾಹಿತ್ಯ ಪ್ರಬಂಧಗಳು ದೂರವಾಗಿರುವುದು ಹೆಚ್ಚು ಕಂಡುಬರುತ್ತವೆ. ಇದಕ್ಕೆಲ್ಲ ಕಾರಣಗಳಿರಬಹುದು. ಅದನ್ನು ಅರ್ಥಮಾಡಿಕೊಂಡಾಗ ಮಾತ್ರ ಸರಿಪಡಿಸಬಹುದು. ಹಾಗಾಗಿ ಸಾಹಿತ್ಯವನ್ನು ಸತತವಾಗಿ ಮೈಗೂಡಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಒಂದು ಸಮಾಜ ಒಳ್ಳೆಯ ದಾರಿಯಲ್ಲಿ ಸಾಗಬೇಕಾದರೆ ಮಾನವೀಯ ಮೌಲ್ಯಗಳು ಪ್ರಮುಖವಾಗಿವೆ.

ಕನ್ನಡ ಸಾಹಿತ್ಯದಲ್ಲಿ ಮಾನವೀಯ ಮೌಲ್ಯಗಳು ಇಲ್ಲದೆ ಇರುವಂಥ ಸಾಹಿತ್ಯ ಪ್ರಕಾರಗಳಿಲ್ಲ. ಪ್ರತಿಯೊಂದು ಸಾಹಿತ್ಯವು ಮೌಲ್ಯಗಳು ಅಳವಡಿಸಿಕೊಂಡಿದೆ. ಪ್ರಾಚೀನ ಕನ್ನಡ ಸಾಹಿತ್ಯದಿಂದ ಆಧುನಿಕ, ಕನ್ನಡ ಸಾಹಿತ್ಯದವರೆಗಿನ ಕನ್ನಡ ಸಾಹಿತ್ಯವು ಮೌಲ್ಯಗಳನ್ನು ಹೊಂದಿದೆ. ಹಾಗಾಗಿ ಮೌಲ್ಯಗಳಿಲ್ಲದ ಸಮಾಜವಿಲ್ಲ, ಮೌಲ್ಯಗಳಿಲ್ಲದ ಸಾಹಿತ್ಯವಿಲ್ಲ ಎಂದು ತಿಳಿಯಬಹುದು.

**ಪರಾಮರ್ಶನ ಗ್ರಂಥಗಳು:**

1. ಮೂರ್ತಿರಾವ್ ಎ.ಎನ್., (1999), ಸಮಗ್ರ ಲಲಿತ ಪ್ರಬಂಧಗಳು, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
2. ಭುವನೇಶ್ವರಿ ಹೆಗಡೆ, (2011), ಸಮಗ್ರ ಲಲಿತ ಪ್ರಬಂಧಗಳು, ಸಪ್ನ ಬುಕ್ ಹೌಸ್, ಬೆಂಗಳೂರು.
3. ಮಹಾದೇವ ಬಡಿಗೇರ, (2013), ಲಲಿತ ಪ್ರಬಂಧ ಸಮೀಕ್ಷೆ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.